# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು - 572 103

ಸಂಖ್ಯೆ:ತುವಿ:ಖ.ಕೋ:15:2026-27/ 660

ದಿನಾಂಕ:26.05.2026

## ದರಪಟ್ಟಿ ಆಹ್ವಾನ

ವಿಷಯ: ಸ್ನಾತಕೋತ್ತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪುರುಷ ವಿದ್ಯಾರ್ಥಿನಿಲಯದಲ್ಲಿ ಸಿ.ಸಿ.ಟಿ.ವಿ.ಗಳನ್ನು ಅಳವಡಿಸುವ ಸಂಬಂಧ ದರಪಟ್ಟಿಗಳನ್ನು ಆಹ್ವಾನಿಸಿರುವ ಕುರಿತು.

ಉಲ್ಲೇಖ: 1. ನಿಲಯಪಾಲಕರು, ಸ್ನಾತಕೋತ್ತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪುರುಷ ವಿದ್ಯಾರ್ಥಿನಿಲಯ ಇವರ ಪತ್ರದ ದಿನಾಂಕ: 05.05.2026

2. ವಿ.ವಿ ಅಧಿಸೂಚನೆ ಪತ್ರದ ಸಂಖ್ಯೆ: ತುವಿತು:ಕೆ.ಟಿ.ಪಿ.ಪಿ/ತಿ.ಪ/ಖ.ಕೋ/2022-23/3095 ದಿನಾಂಕ: 09.09.2022

3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 24.05.2026

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(01)ರ ಬೇಡಿಕೆಯನುಸಾರ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪುರುಷ ವಿದ್ಯಾರ್ಥಿನಿಲಯದಲ್ಲಿ ಸಿ.ಸಿ.ಟಿ.ವಿ.ಗಳನ್ನು ಅಳವಡಿಸುವ ಸಂಬಂಧ ಉಲ್ಲೇಖ (02)ರ ವಿಶ್ವವಿದ್ಯಾನಿಲಯದ ಆದೇಶದಂತೆ ಕೆಳಕಂಡ ಕೋಷ್ಟಕದಲ್ಲಿ ತಿಳಿಸಿರುವಂತೆ ಷರತ್ತುಗಳಿಗೊಳಪಟ್ಟು ಆಸಕ್ತ ನೊಂದಾಯಿತ ಸಂಸ್ಥೆಗಳಿಂದ ಉಲ್ಲೇಖ (03)ರ ಅನುಮೋದನೆ ಮೇರೆಗೆ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

| Sl No | Product Description | Qty in Nos. | Price |
|---|---|---|---|
| 01 | Cp Plus IP IR Dome Camera 4MP | 17 No. | |
| 02 | Cp Plus IP IR Bullet Camera 4MP | 04 No. | |
| 03 | 32 Channel NVR System withaudio recorder HDMI & VGA Port with night vision | 01 No. | |
| 04 | 4 TB Surveillance Hard disk | 01 No. | |
| 05 | 4U Rack with Busbar for fixing NVR and related accessories | 1 No. | |
| 06 | Supply and fixing of 4x4" PVC Box | 21 No. | |
| 07 | 1 Inch PVC pipe with Accessories | 250 mtrs | |
| 08 | Cat 6 Cable D-link Copper Cable | 700 mtrs | |
| 09 | 16 port poe giga Switch | 02 No. | |
| 10 | 1 U Rack with Busbar for fixing NVR and related accessories. | 01 No. | |
| 11.a. | Installation, Testing and Commissioning of NVR, Switches, Rack along with all related accessories. | 01 No. | |
| b. | Installation, Testing and Commissioning of Camera CCTVSecurity Surveillance System along with related accessories. | 21 No. | |

**ಷರತ್ತು ಮತ್ತು ನಿಬಂಧನೆಗಳು:**

1. ಲಕೋಟೆಯ ಮೇಲೆ "ಸ್ನಾತಕೋತ್ತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪುರುಷ ವಿದ್ಯಾರ್ಥಿನಿಲಯದಲ್ಲಿ ಸಿ.ಸಿ.ಟಿ.ವಿ. ಅಳವಡಿಸುವ ಸಂಬಂಧ ದರಪಟ್ಟಿ" ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.
2. ವಿಶ್ವವಿದ್ಯಾನಿಲಯವು ಸೂಚಿಸುವ ಸ್ಥಳಕ್ಕೆ ಸಿ.ಸಿ.ಟಿ.ವಿ. ಅಳವಡಿಸುವ ಸಂಬಂಧ ಸಾರಿಗೆ ವೆಚ್ಚವನ್ನು ಸರಬರಾಜುದಾರರೇ ಭರಿಸತಕ್ಕದ್ದು.
3. ಸಿ.ಸಿ.ಟಿ.ವಿ.ಗಳ ಪ್ರಮಾಣಗಳನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿರುತ್ತದೆ.
4. ದರಪಟ್ಟಿಯನ್ನು ಸಲ್ಲಿಸಲು ಕೊನೆಯ ದಿನಾಂಕ: **08.06.2026** ಅಪರಾಹ್ನ **03.30** ಗಂಟೆ.

(ಪು.ತಿ.ನೋ)

5. ದರಪಟ್ಟಿಗಳನ್ನು **ಕುಲಸಚಿವರು, ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್. ರಸ್ತೆ, ತುಮಕೂರು–572 103** ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಲ್ಲಿ ವಿಶ್ವವಿದ್ಯಾನಿಲಯವು ಜವಾಬ್ದಾರರಾಗುವುದಿಲ್ಲ.
6. ದರಪಟ್ಟಿ ಸಲ್ಲಿಸುವ ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ದರಪಟ್ಟಿಯ ಜೊತೆಗೆ ಲಗತ್ತಿಸತಕ್ಕದ್ದು.
7. ದರಪಟ್ಟಿಯಲ್ಲಿ ನಮೂದಿಸುವ ದರಗಳು ತೆರಿಗೆ, ಸಾಗಾಣಿಕಾ ವೆಚ್ಚ ಮತ್ತು ಇತರೆ ಸೇವೆಯ ಮೊತ್ತವನ್ನು ಒಳಗೊಂಡಿರತಕ್ಕದ್ದು.
8. ದರಪಟ್ಟಿಯನ್ನು ಅಂಗೀಕರಿಸುವಾಗ ಸಂಸ್ಥೆಗಳು ಸಲ್ಲಿಸಿದ ದರಪಟ್ಟಿಗಳಲ್ಲಿನ ಉಪಕರಣಗಳವಾರು ಅತೀ ಕಡಿಮೆ ದರಗಳನ್ನು ಪರಿಗಣಿಸಲಾಗುವುದು.
9. ದರಪಟ್ಟಿಗಳ ಆಯ್ಕೆಯ ವಿಷಯದಲ್ಲಿ ತುಮಕೂರು ವಿಶ್ವವಿದ್ಯಾನಿಲಯವು ರಚಿಸಿಕೊಂಡಿರುವ ನಿಯಮಾವಳಿಗೆ ಬದ್ಧವಾಗಿ ಆಯ್ಕೆ ಮಾಡಲಾಗುವುದು ಮತ್ತು ಇದರಲ್ಲಿ ವಿಶ್ವವಿದ್ಯಾನಿಲಯದ ತೀರ್ಮಾನವೇ ಅಂತಿಮವಾಗಿರುತ್ತದೆ.
10. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
11. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಸಂಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
12. ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
13. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ **ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು** ಇವರನ್ನು ಸಂಪರ್ಕಿಸಬಹುದು.

ಆದೇಶದ ಮೇರೆಗೆ

ಉಪಕುಲಸಚಿವರು
ಖರೀದಿ ಕೋಶ
ತುಮಕೂರು ವಿಶ್ವವಿದ್ಯಾನಿಲಯ

ಪ್ರತಿಗಳು:

1. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು)
2. ನಿಲಯಪಾಲಕರು, ಸ್ನಾತಕೋತ್ತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪುರುಷ ವಿದ್ಯಾರ್ಥಿನಿಲಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕಚೇರಿ ಪ್ರತಿ.